**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 12724/2008**

| | |
|---|---|
| **ಸಾಕ್ಷಿದಾರರ ಹೆಸರು** | **ಜಿ. ರಾಮಕೃಷ್ಣ** |
| **ತಂದೆಯ ಹೆಸರು** | **ಲೇಟ್. ಗಿರಿಯಪ್ಪ** |
| **ವಯಸ್ಸು** | **75 ವರ್ಷ** |
| **ಉದ್ಯೋಗ** | **ನಿವೃತ್ತ ಸರ್ಕಾರಿ ನೌಕರ** |
| **ವಾಸ** | **ಹೌಸಿಂಗ್ ಬೋರ್ಡ್ ಕಾಲೋನಿ, ಬೆಂಗಳೂರು.** |
| **ಪ್ರಮಾಣೀಕರಿಸಿದ ದಿನಾಂಕ** | **24/05/2023** |

**ಮುಖ್ಯ ವಿಚಾರಣೆ : ಆರೋಪಿ ಪರ ಶ್ರೀ. ಎಸ್.ಎಮ್.ಟಿ. ವಕೀಲರಿಂದಃ**

ನಾನು ಶ್ರೀ. ದಯಾನಂದ ಗೃಹ ನಿರ್ಮಾಣ ಸಹಕಾರಿ ಸಂಘದ ಮಾಜಿ ಅಧ್ಯಕ್ಷನಾಗಿರುತ್ತೇನೆ. 1972 ರಲ್ಲಿ ಸದರಿ ಸಂಘ ನೊಂದಣಿಯಾಗಿರುತ್ತದೆ. ಇದರ ಉದ್ದೇಶ ಜಮೀನುಗಳನ್ನು ಕ್ರಯಕ್ಕೆ ಪಡೆದು, ಅಭಿವೃದ್ಧಿ ಪಡೆಸಿ ಸಂಘದ ಸದಸ್ಯರೊಳಗೆ ಹಂಚಿಕೆ ಮಾಡಿ ನೊಂದಣಿ ಮಾಡುವ ಉದ್ದೇಶ ಹೊಂದಿರುತ್ತದೆ. 1975 ರಲ್ಲಿ ನಾನು ಸದರಿ ಸಂಘದ ಸದಸ್ಯತ್ವವನ್ನು ಪಡೆದಿರುತ್ತೇನೆ. 1983 ರಲ್ಲಿ ನಾನು ಆಡಳಿತ ಮಂಡಳಿಗೆ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುತ್ತೇನೆ. 1983 ನೇ ಇಸವಿಯಲ್ಲಿ ಸಂಘವು ಶ್ರೀಗಂಧದ ಕಾವಲು ಗ್ರಾಮದಲ್ಲಿ 15 ಎಕರೆ 14 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದುಕೊಂಡು ಭೂ ಪರಿವರ್ತನೆ ಮಾಡಿಸಿ, ನಿವೇಶನಗಳನ್ನು ಮಾಡಿ ಹಂಚಲು ತೀರ್ಮಾನಿಸಿರುತ್ತದೆ. ಸಂಘದ ಹೆಸರಿನಲ್ಲಿ ಕೃಷಿ ಜಮೀನು ಇಲ್ಲದ ಕಾರಣ ನನ್ನ ಹೆಸರಿನಲ್ಲಿ ಹಾಗೂ ಸಂಘದ ಸದಸ್ಯರಾದ 1 ನೇ ಆರೋಪಿ ಹೊನ್ನಗಂಗಯ್ಯರವರ ಹೆಸರಿನಲ್ಲಿ ಖರೀದಿಸಲು

ತೀರ್ಮಾನಿಸಿರುತ್ತದೆ. ಸದರಿ 15 ಎಕರೆ 14 ಗುಂಟೆ ಜಮೀನನ್ನು ನನ್ನ ಮತ್ತು 1 ನೇ ಆರೋಪಿಯ ಹೆಸರಿನಲ್ಲಿ ಖರೀದಿಸಿ 150 ನಿವೇಶನಗಳನ್ನು ಮಾಡಿ, 150 ಜನ ಸದಸ್ಯರುಗಳಿಗೆ ಹಂಚಿಕೆ ಮಾಡಿ ಅವರು ಹೆಸರುಗಳಿಗೆ ನೊಂದಣಿ ಮಾಡಿಸಲಾಗಿರುತ್ತದೆ.

ಫಿರ್ಯಾದುದಾರರಾದ ಸೀತಾರಾಮ ಅವರು ನನಗೆ ಕಳೆದ 20 ವರ್ಷಗಳಿಂದ ಪರಿಚಯವಿರುತ್ತದೆ. ಫಿರ್ಯಾದುದಾರರು ಸಂಘದ ಸದಸ್ಯರಾಗಿರಲಿಲ್ಲ. ಸುಮಾರು 20 ವರ್ಷಗಳ ಹಿಂದೆ ನನ್ನನ್ನು ಸಂಪರ್ಕಿಸಿ ತನಗೆ ಒಂದು ನಿವೇಶನವನ್ನು ಕೊಡಿಸಿ ಕೊಡಬೇಕೆಂದು ನನ್ನ ಬಳಿ ಕೇಳಿಕೊಂಡಿರುತ್ತಾರೆ. ಫಿರ್ಯಾದುದಾರರು ಸಂಘದ ಸದಸ್ಯರಲ್ಲದ ಕಾರಣ ಅವರಿಗೆ ನಿವೇಶನವನ್ನು ಹಂಚಿಕೆ ಮಾಡಲು ಸಾಧ್ಯವಿಲ್ಲವೆಂದು ಸಂಘವು ತೀರ್ಮಾನಿಸಿರುತ್ತದೆ. ಅಂದಿನಿಂದ ಫಿರ್ಯಾದುದಾರರು ಹಲವಾರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಈ ಪ್ರಕರಣವನ್ನು ಸೇರಿಕೊಂಡು ಇತರೆ ಹಲವಾರು ಪ್ರಕರಣಗಳನ್ನು ನನ್ನ ಮತ್ತು ಸಂಘದ ವಿರುದ್ದ ದಾಖಲಿಸಿರುತ್ತಾರೆ. ಸಹಕಾರಿ ಇಲಾಖೆಯಲ್ಲಿ ವಿವಿಧ ಅಧಿಕಾರಿಗಳಿಗೆ ಸುಳ್ಳು ದೂರುಗಳನ್ನು ನೀಡುವ ಹವ್ಯಾಸವನ್ನು ಮಾಡಿಕೊಂಡಿರುತ್ತಾರೆ.

ಈ ಕೇಸಿನಲ್ಲಿ ಹಾಜರು ಪಡಿಸಿರುವ ನಿಪಿ-11 ಸೃಷ್ಟಿ ಮಾಡಿದ ದಾಖಲೆಯಾಗಿರುತ್ತದೆ. ನಿಪಿ-11 ರ ಮೂಲ ದಾಖಲೆಯನ್ನು ಫಿರ್ಯಾದುದಾರರು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ-11 ಕ್ಕೆ ಸಂಬಂಧಪಟ್ಟಂತೆ ನಮ್ಮ ಸಂಘದ ಕಛೇರಿಯಲ್ಲಿ ನಿರ್ವಹಿಸಿರುವ ಯಾವುದೇ Register ನಲ್ಲಿ ಉಲ್ಲೇಖ ಇರುವುದಿಲ್ಲ. ನಿಪಿ-11 ದಾಖಲೆಯನ್ನು ಈ ದಿನ ನ್ಯಾಯಾಲಯದಲ್ಲಿ ನೋಡುತ್ತಿದ್ದು, ಇದರಲ್ಲಿ ನನ್ನ ಸಹಿ ಇರುವುದಿಲ್ಲ. ಹಣ ಸಂದಾಯವಾದಾಗ ರಶೀದಿಗಳನ್ನು ಸಂಘದ ಕಾರ್ಯದರ್ಶಿಯವರು ನೀಡಬೇಕಾಗುತ್ತದೆ. ದೂರುದಾರರು ನಿಪಿ-11 ರಶೀದಿಯನ್ನು ರಾಮದಾಸ ಅವರ ಕಡೆಯಿಂದ

ಪಡೆದಿರುವುದಾಗಿ ಹೇಳಿರುತ್ತಾರೆ. ರಾಮದಾಸ ಅವರು ದಿನಾಂಕ 01/04/2018 ರಂದು ಸಂಘಕ್ಕೆ ಒಂದು ಪತ್ರವನ್ನು ಬರೆದು, ಸೀತಾರಾಮ ಎಂಬುವವರು ಸಂಘದ ಸದಸ್ಯರಾಗಿರುವುದು ಮತ್ತು ಅವರು ಸಂಘಕ್ಕೆ ರೂ. 2,000/- ಪಾವತಿಸಿರುವುದು ವಿಷಯ ತನಗೆ ಗೊತ್ತಿಲ್ಲವೆಂದು ಮತ್ತು ತಾನು ಸಹ ಸೀತಾರಾಮ ಅವರ ಪರವಾಗಿ ಸಂಘಕ್ಕೆ ರೂ. 2,000/- ಹಣವನ್ನು ಪಾವತಿಸಿಲ್ಲವೆಂದು ಪತ್ರ ಬರೆದಿರುತ್ತಾರೆ.

**(ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

**ಸಾಕ್ಷಿಯನ್ನು ದಿನಾಂಕ 19/06/2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ : ಆರೋಪಿ ಪರ ಶ್ರೀ. ಎಸ್.ಎಮ್.ಟಿ. ವಕೀಲರಿಂದಃ**

4. ಫಿರ್ಯಾದಿದಾರರು ನಿಪಿ-11 ಮತ್ತು 13 ದಾಖಲೆಗಳನ್ನು ಸೃಷ್ಟಿಸಿ ದುರುಪಯೋಗಪಡಿಸಿಕೊಂಡಿರುತ್ತಾರೆ. ನಿಪಿ-13(ಎ) ನನ್ನ ಸಹಿ ಆಗಿರುವುದಿಲ್ಲ. ನಮ್ಮ ಸಂಘದ ಕ್ಯಾಶ ಪುಸ್ತಕದಲ್ಲಾಗಲೀ ಅಥವಾ ರಶೀದಿ ಪುಸ್ತಕದಲ್ಲಾಗಲೀ ನಿಪಿ-13 ರ ವಿವರ ಇರುವುದಿಲ್ಲ. ಫಿರ್ಯಾದುದಾರರು ನಮ್ಮ ಸಂಘಕ್ಕೆ ಯಾವತ್ತೂ ಹಣ ಪವತಿಸಿರುವುದಿಲ್ಲ. ನಮ್ಮ ಸಂಘದ ರಶೀದಿ ಮತ್ತು ಕ್ಯಾಶ ಪುಸ್ತಕದ ಪ್ರಕಾರ ರಶೀದಿ ನಂ.21 ರ ಮೂಲಕ ಶ್ರೀಮತಿ ಸ್ವರ್ಣಲತಾ ಅವರು ದಿನಾಂಕ 08/07/1988 ರಂದು ರೂ.253.58/- ಹಣ ಪವತಿಸಿರುತ್ತಾರೆ. ದಿನಾಂಕ 04/09/2001 ರಂದು ಕೆ. ರವೀಂದ್ರ ರವರು ನಿವೇಶನ ಠೇವಣಿಯಗಿ ರೂ. 30,000/- ಹಣವನ್ನು ಸಂಘಕ್ಕೆ ನೀಡಿದ್ದು, ಸಂಘವು ರಶೀದಿ ನಂ. 29 ನ್ನು ಸದರಿಯವರಿಗೆ ನೀಡಿರುತ್ತದೆ. ನಿಪಿ-13 ಸಹ ರಶೀದಿ ನಂ. 29 ಆಗಿದ್ದು, ನಿಪಿ-13 ಸೃಷ್ಟಿ ಮಾಡಿದ ದಾಖಲೆಯಾಗಿದ್ದು, ಅದರಲ್ಲಿರುವ ಸಹಿ ನನ್ನದಲ್ಲ. ರಶೀದಿ ನಂ. 21 ಮತ್ತು 29 ರ ಮೂಲ ದಾಖಲೆಗಳನ್ನು 9 ನೇ ಎ.ಸಿ.ಎಮ್.ಎಮ್, ನ್ಯಾಯಾಲಯದ ಸಿ.ಸಿ.ನಂ. 12771/2021 ರಲ್ಲಿ ಹಾಜರುಪಡಿಸಿರುತ್ತೇನೆ. ಆದ್ದರಿಂದ ಈ ನ್ಯಾಯಾಲಯದಲ್ಲಿ ಸದರಿ ದಾಖಲೆಗಳ ದೃಡೀಕೃತ ಪ್ರತಿಗಳನ್ನು ಕೊಟಿರುತ್ತೇನೆ. ನಿಪಿ-11 ಮತ್ತು 13 ದಾಖಲೆಗಳನ್ನು ಫಿರ್ಯಾದುದಾರರು ದುರುಪಯೋಗಪಡಿಸಿಕೊಂಡ ಬಗ್ಗೆ ನಾನು ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಮೊ.ಸಂ.148/2009 ರಂತೆ ದೂರು ದಾಖಲಾಸಿರುತ್ತೇನೆ. ಸದರಿ ಪ್ರಕರಣದ ಪ್ರ.ವ ವರದಿಯ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಡಿ-6 ಎಂದು ಗುರುತಿಸಲಾಯಿತು. ಪೊಲೀಸರು ಸದರಿ ಪ್ರಕರಣದಲ್ಲಿ ಬಿ ಅಂತಿಮ

ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಗೆ ನಾನು ತಕರಾರು ಸಲ್ಲಿಸಿರುತ್ತೇನೆ. ಪ್ರರಾಮದಾಸ ಅವರು ನಮ್ಮ ಸಂಘಕ್ಕೆ ಬರೆದ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿಡಿ-7 ಎಂದು ಫಿರ್ಯಾದಿ ಪರ ವಕೀಲರ ತಕರಾರಿಗೆ ಒಳಪಡಿಸಿ ಗುರುತಿಸಲಾಯಿತು. ಫಿರ್ಯಾದಿದಾರರು ಸಂಘದ ವಿರುದ್ದ ಸಹಕಾರ ಸಂಘಗರ ಸಂಯುಕ್ತ ನಿಭಂದಕರ ಕಛೇರಿಯಲ್ಲಿ ದೂರು ಅರ್ಜಿ ಸಲ್ಲಿಸಿರುತ್ತಾರೆ. ಸಹಕಾರ ಸಂಘಗರ ಸಂಯುಕ್ತ ನಿಭಂದಕರು ನಿಡಿ-1 ಮತ್ತು 2 ರಂತೆ ಆದೇಶಗಳನ್ನು ಮಾಡಿರುತ್ತಾರೆ.

**ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

**ಸಾಕ್ಷಿಯನ್ನು ದಿನಾಂಕ 28/06/2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ : ಆರೋಪಿ ಪರ ಶ್ರೀ. ಎಸ್.ಎಮ್.ಟಿ. ವಕೀಲರಿಂದಃ**

5. ನಿಪಿ-14 ನ್ನು ನೋಡುತ್ತಿದ್ದು, ಇದು ನಿವೇಶನ ಹಂಚಿಕೆಯ ಪತ್ರವಾಗಿರುತ್ತದೆ. ಸದರಿ ಪತ್ರವನ್ನು ಸಿ.ಎಮ್. ಮರಿಯಪ್ಪ ರವರು ಸೀತಾರಾಮರವರಿಗೆ ಬರೆದಿರುತ್ತಾರೆ. ಸದರಿ ಪತ್ರದಲ್ಲಿ ನನ್ನ ಹೆಸರು ನಮೂದಿಸಿದ್ದು, ಸದರಿ ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಸದರಿ ಪತ್ರವನ್ನು ನಮ್ಮ ಸಂಘದಿಂದ ಕೊಟ್ಟಿರುವುದಿಲ್ಲ. ಸದರಿ ನಿಪಿ-14 ಒಂದು ಕೊಟ್ಟಿ ನಿವೇಶನ ಹಂಚಿಕೆ ಪತ್ರವಾಗಿರುತ್ತದೆ. ಈ ಪ್ರಕರಣದಲ್ಲಿ ಫಿರ್ಯಾದುದಾರರು ಸಂಘದ ವಿರುದ್ದ ದೂರನ್ನು ದಾಖಲಿಸದೆ ನನ್ನ ವಿರುದ್ದ ಸುಳ್ಳು ದೂರನ್ನು ಕೊಟ್ಟಿರುತ್ತಾರೆ. ನಾನು ಸಂಘದ ಪರವಾಗಿ ತೀರ್ಮಾನಗಳನ್ನು ತೆಗೆದುಕೊಂಡಿದ್ದೇನೆ ಹೊರತು ಯಾವುದೇ ವೈಯಕ್ತಿಕ ತೀರ್ಮಾನಗಳನ್ನು ತೆಗೆದುಕೊಂಡಿಲ್ಲ. ಫಿರ್ಯಾದುದಾರರು ಅಕ್ರಮವಾಗಿ ನಿವೇಶನವನ್ನು ಪಡೆಯುವ ಸಲುವಾಗಿ ನನ್ನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ನನ್ನ ಮೇಲೆ ಒತ್ತಡ ಹೇರಿರುತ್ತಾರೆ. ಫಿರ್ಯಾದುದಾರರು ನನ್ನ ವಿರುದ್ದ 24 ನೇ ಎ.ಸಿ.ಎಮ್,ಎಮ್, ನ್ಯಾಯಾಲಯದಲ್ಲಿ ಸಿ.ಸಿ. 25865/2010 ರಂತೆ ಮಾನ ನಷ್ಟ ಮೊಕದ್ದಮೆ ಹೂಡಿದ್ದು, ಸದರಿ ಪ್ರಕರಣ ವಜಾ ಆಗಿರುತ್ತದೆ. ಫಿರ್ಯಾದುದಾರರು ನನ್ನ ವಿರುದ್ದ ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳಿರುತ್ತಾರೆ. ನಾನು ಯಾವುದೇ ಅಪರಾಧ ಮಾಡಿಲ್ಲದೇ ಕಾರಣ ನನ್ನನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ ಫಿರ್ಯಾದುದಾರರು ಕಾಲಾವಕಾಶ ಕೋರಿರುತ್ತಾರೆ, ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**